[ Govt. of Karnataka C.R.P. 67]

Deposition Sheets (RP.No.57) Form No.4

**IN THE COURT OF Addl. CIVIL JUDGE & J.M.F.C., KARKALA.**

**Criminal Case No. 1992/2016**

ಪಿ.ಡಬ್ಲ್ಯು : 1 ಸಿ.ಡಬ್ಲ್ಯು : 2

ಸಾಕ್ಷಿದಾರನ ಹೆಸರು : ಶ್ಯಾಮ್
ತಂದೆಯ ಹೆಸರು : ಅಂಗಾರ
ಪ್ರಾಯ : 39 ವರ್ಷ
ಉದ್ಯೋಗ : ಕೂಲಿ
ವಾಸ : ಬೋಳ

ದಿನಾಂಕ 25.09.2024 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

ಮುಖ್ಯ ವಿಚಾರಣೆಃ ಸಹಾಯಕ ಸರ್ಕಾರಿ ಅಭಿಯೋಜಕರುಃ-

3 ನೇ ಆರೋಪಿಯ ಪರಿಚಯ ಇರುತ್ತದೆ. 4 ನೇ ಆರೋಪಿ ಉಮೇಶ್ ರವರ ಪರಿಚಯ ಇರುವುದಿಲ್ಲ. ಚಾಸಾ-1 ಮತ್ತು 3 ರವರ ಪರಿಚಯ ಇರುವುದಿಲ್ಲ.

ನಾನು ಯಾವುದೆ ಗಲಾಟೆಯನ್ನು ನೋಡಿರುವುದಿಲ್ಲ. ಚಾಸಾ-1 ರವರಿಗೆ ಆರೋಪಿತರು ಅವಾಚ್ಯ ಶಬ್ದಗಳಿಂದ ಬೈದು, ಹಲ್ಲೆ ಮಾಡಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ನಾನು ಚಾಸಾ-1 ರವರನ್ನು ಉಪಚರಿಸಿರುವುದಿಲ್ಲ. ಈ ಘಟನೆಗೆ ಏನು ಕಾರಣ ಹಾಗೂ ಈ ಘಟನೆಯ ಬಗ್ಗೆ ದೂರು ದಾಖಲಾದ ಬಗ್ಗೆ ನನಗೆ ಗೊತ್ತಿಲ್ಲ. ನಾನು ಪೊಲೀಸರ ಮುಂದೆ ಹೇಳಿಕೆ ನೀಡಿರುವುದಿಲ್ಲ. ಆರೋಪಿತರು ಚಾಸಾ-1 ರವರಿಗೆ ಹಲ್ಲೆ ಮಾಡಿದ ಕಲ್ಲನ್ನು ಗುರುತಿಸಲು ಸಾಧ್ಯವಿಲ್ಲ.

(ಈ ಹಂತದಲ್ಲಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಸಸಅ ರವರು ಅನುಮತಿ ಕೋರಿರುತ್ತಾರೆ. ಅನುಮತಿ ನೀಡಲಾಯಿತು)

<u>ಪಾಟೀ ಸವಾಲು</u> : <u>ಸಹಾಯಕ ಸರ್ಕಾರಿ ಅಭಿಯೋಜಕರು:-</u>

ದಿ:22.03.2016 ರಂದು ನೀವು ಹಾಗೂ ಚಾಸಾ-3 ರವರು ರಾತ್ರಿ ಬೋಳಗ್ರಾಮದಮಂಜರಪಲ್ಕೆ ಕಿರ್ತನ ಬಾರ್ ಎದುರು ಮಾತಾನಾಡುತ್ತಿರುವಾಗ ಚಾಸಾ-1 ರವರು ಕಿರ್ತನ ಬಾರ್ ಸಮೀಪ ಇರುವ ಬೀಡ ಅಂಗಡಿಯ ಬಳಿ ನಿಂತುಕೊಂಡಿದ್ದಾಗ ರಾತ್ರಿ 8.45 ಗಂಟೆಗೆ ಆರೋಪಿತರು ಚಾಸಾ-1 ರ ವರ ಬಳಿ ಬಂದು ಅವರಲ್ಲಿ 1 ನೇ ಆರೋಪಿಯು ಚಾಸಾ-1 ರ ವರನ್ನು ಉದ್ದೇಶಿಸಿ ಬೆವರ್ಸಿ ಸೂಳೆ ಮಗನೆ ಅವಾಚ್ಯ ಶಬ್ದಗಳಿಂದ ಬೈದು ರಸ್ತೆಯಲ್ಲಿ ಬಿದ್ದಿದ್ದ ನ್ಯಾಯಾಲಯದ ಮುಂದೆ ಇರುವ ಕಲ್ಲನ್ನು ಹೆಕ್ಕಿ ಚಾಸಾ-1 ರವರ ತಲೆಯ ಹಿಂಭಾಗಕ್ಕೆ ಹೊಡೆದಿರುತ್ತಾರೆ ಎಂದರೆ ಸರಿಯಲ್ಲ. 2 ರಿಂದ 4 ನೇ ಆರೋಪಿತರು ಚಾಸಾ-1 ರವರಿಗೆ ಕೈಯಿಂದ ಬೆನ್ನಿಗೆ, ಕೆನ್ನೆಗೆ, ಕಾಲಿಗೆ ಹೊಡೆದು ಕಾಲಿನಿಂದ ಬೆನ್ನಿಗೆ, ಹೊಟ್ಟೆಗೆ ತುಳಿದಿರುತ್ತಾರೆ ಎಂದರೆ ಸರಿಯಲ್ಲ. ಆರೋಪಿತರನ್ನು ನಾನು ಆ ದಿನ ನೋಡಿರುತ್ತೇನೆ ಹಾಗೂ ಆರೋಾಪಿತರು ನನ್ನನ್ನು ನೋಡಿ ಅಲ್ಲಿಂದ ಹೊರಟುಹೋದರು ಎಂದರೆ ಸರಿಯಲ್ಲ. ನಾನು ಚಾಸಾ-1 ರವರನ್ನು ಎತ್ತಿ ಉಪಚರಿಸಿ ನಂತರ ಚಾಸಾ-1 ರವರು ಮನೆಗೆ ಹೋಗಿರುತ್ತಾರೆ ಎಂದರೆ ಸರಿಯಲ್ಲ.

ನಂತರ ದಿ:23.03.2016 ರಂದು ಚಾಸಾ-1 ರವರಿಗೆ ಹಲ್ಲೆಯಿಂದ ಆದ ನೋವು ಜಾಸ್ತಿಯಾಗಿದ್ದು ಕಾರ್ಕಳ ಸರಕಾರಿ ಆಸ್ಪತ್ರೆಗೆ ಭೇಟಿ ನೀಡಿ ಚಿಕಿತ್ಸೆಯನ್ನು ಪಡೆದುಕೊಂಡಿರುತಾತರೆ ಎಂಬ ವಿಚಾರ ನನಗೆ ತಿಳಿಯಿತು ಎಂದರೆ ಸರಿಯಲ್ಲ. ಕೂಲಿ ಕೆಲಸದ ವಿಚಾರ ಚಾಸಾ-1 ಹಾಗೂ ಆರೋಪಿತರ ನಡುವೆ ವೈಮನಸ್ಸು ಇದ್ದು ಆ ವಿಚಾರವಾಗಿ ಆರೋಪಿತರು ಚಾಸಾ-1 ರವರಿಗೆ ಹಲ್ಲೆ ಮಾಡಿರುತ್ತಾರೆ ಈ ಬಗ್ಗೆ ಚಾಸಾ-1 ರ ವರು ಆರೋಪಿತರ ವಿರುದ್ದ ದೂರು ದಾಖಲು ಮಾಡಿರುತ್ತಾರೆ ಎಂಬ ವಿಚಾರ ನನಗ ತಿಳಿದಿರುತ್ತದೆ

ಈ ಬಗ್ಗೆ ದಿಃ05.07.2016 ರಂದು ಪೊಲೀಸರಿಗೆ ಹೇಳಿಕೆಯನ್ನು ನೀಡಿರುತ್ತೇನೆ ಎಂದರೆ ಸರಿಯಲ್ಲ. ಸಾಕ್ಷಿಯ ಹೇಳಿಕೆಯ ಭಾಗವನ್ನು ನಿಪಿ-1 ಎಂದು ಗುರುತಿಸಲಾಯಿತು. ಆರೋಪಿತರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

<u>ಪಾಟೀ ಸವಾಲು </u>: ಆರೋಪಿ ಪರ : ಶ್ರೀ ಎಸ್ ಬಿ ಕೆ ವಕೀಲರಿಂದ ಃ ಏನು ಇಲ್ಲ.

ಮರುವಿಚಾರಣೆ: ಇಲ್ಲ

ನನ್ನ ಉಕ್ತಲೇಖನಾ ರೀತ್ಯಾ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಓದಿ ಹೇಳಿ ಕೇಳಿ ಸರಿ ಇದೆ.

ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು
ಮತ್ತು ಪ್ರ.ದ.ನ್ಯಾದಂ. ಕಾರ್ಕಳ